1	2	3
16.	ಹಾಸನ	1191
17.	ಹಾವೇರಿ	916
18.	ಕೋಲಾರ	2295
19.	ಕಾರವಾರ	852
20.	ಕೊಪ್ಪಳ	498
21.	ಮಂಡ್ಯ	1534
22.	ಕೊಡಗು	335
23.	ಮಂಗಳೂರು	727
24.	ಮೈಸೂರು	1581
25.	ರಾಯಚೂರು	741
26.	ಶಿವಮೊಗ್ಗ	975
27.	ತುಮಕೂರು	1370
28.	ಉಡುಪಿ	511
	ಒಟ್ಟು ~	31525

ಹಿರೇಕೆರೂರು ಬಸವೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಕುರಿತು

4668 (5202) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರೇಕೆರೂರು ಬಸವೇಶ್ವರ ಸಹಕಾರಿ ಕಾರ್ಖಾನೆಯವರು ಧಾರವಾಡ ಕೆ.ಸಿ.ಸಿ. ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿ ಹಣ ಎಷ್ಟು;

ಆ) ಠೇವಣಿ ಹಣದ ಮೇಲೆ ದಿನಾಂಕ 31.03.2003ಕ್ಕೆ ಕೆ.ಸಿ.ಸಿ. ಬ್ಯಂಕಿನಿಂದ ಪಡೆದ ಬಡ್ಡಿ ಎಷ್ಟು;

ಇ) ಈ ಸಕ್ಕರೆ ಕಾರ್ಖಾನೆಯವರು ಸಂಘಗಳಿಗೆ ಡಿವಿಂಡೆಂಡ್ ಕೊಟ್ಟ ಹಣ ಎಷ್ಟು;

ಈ) ಸಂಘಗಳಿಂದ ಶೇರು ಹಣವನ್ನಾಗಿ ಪರಿವರ್ತಿಸಿದ ಶೇರು ಹಣವೆಷ್ಟು;

ಉ) ಸಂಘಗಳು ಬಡ್ಡಿಗೆ ಪಡೆಯದೆ ಠವಾಲಿ ಜಮಾ ಖರ್ಚು ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಕಾರ್ಖಾನೆಯು ದಿನಾಂಕ 31.3.2003ಕ್ಕೆ ಕೆಸಿಸಿ ಬ್ಯಾಂಕ್ (ನಿ), ಧಾರವಾಡ ಇಲ್ಲಿ ಒಟ್ಟು ರೂ. 610.99 ಲಕ್ಷ ಠೇವಣಿ ಇಟ್ಟಿರುತ್ತದೆ.

ಆ) ಠೇವಣಿ ಹಣದ ಮೇಲೆ ದಿನಾಂಕ 30.3.2003ಕ್ಕೆ ಕೆಸಿಸಿ ಬ್ಯಾಂಕಿನಿಂದ ರೂ. 31.05 ಲಕ್ಷ ಬಡ್ಡಿ ಪಡೆಯಲಾಗಿದೆ.

ಇ) ಕಾರ್ಖಾನೆಯು. ಸಂಘಗಳಿಗೆ ಡಿವಿಡೆಂಟ್ ಹಣ ಕೊಟ್ಟಿರುವುದಿಲ್ಲ. ಕಾರ್ಖಾನೆಯು 1999–2000 ದಿಂದ 2001–02ನೇ ಸಲುಗಳಲ್ಲಿ ಗಳಿಸಿದ ಲಾಭದಲ್ಲಿ ಸಹಕಾರ ಸಂಘಗಳಿಗೆ

ಪಾವತಿಸಬೇಕಾಗಿದ್ದ ಲಾಭಾಂಶ ರೂ. 11.2.86 ಲಕ್ಷಗಳನ್ನು ಅಂತಹ ಸಹಕಾರ ಸಂಘಗಳಿಗೆ ಶೇರು ಬಂಡವಾಳವೆಂದು ಪರಿವರ್ತಿಸಿಕೊಂಡಿರುತ್ತದೆ.

ಈ) ಸಂಘಗಳಿಂದ ಶೇರು ಹಣವನ್ನು ಪರಿವರ್ತಿಸಿದ ಮೊತ್ತ ರೂ. 11.2.86 ಲಕ್ಷ ಇರುತ್ತದೆ.

ಉ) ಬಂದಿದೆ.

ರಾಜ್ಯದಲ್ಲಿರುವ ಗ್ರಾಮ ವ್ಯವಸಾಯ ಸೇವಾ ಸಹಕಾರ ಕೇಂದ್ರಗಳು

4669 (5203) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಆ) ದಿನಾಂಕ 1.3.2003ಕ್ಕೆ ಅನ್ವಯವಾಗುವಂತೆ ಎಷ್ಟು ಸೇವಾ ಸಹಕಾರ ಸಂಘಗಳು ಬ್ಯಾಂಕುಗಳಾಗಿ ಕೆಲಸ ಮಾಡುತ್ತಿವೆ?

ಇ) ಈ ಸಂಘ ಬ್ಯಾಂಕುಗಳು ದಿನಾಂಕ : 1.3.2003 ಕ್ಕೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ಕಟ್ಟಬೇಕಾದ ಸಾಲದ ಅಸಲು ಹಾಗೂ ಬಡ್ಡಿ ಎಷ್ಟು?

ಈ) ಈ ಸಂಘ ಬ್ಯಾಂಕುಗಳು 2002–03ನೇ ಸಾಲಿನಲ್ಲಿ ಲಾಭ ಗಳಿಸಿದ್ದು ಎಷ್ಟು? ಹಾನಿಗೊಳಗಾದ ಬ್ಯಾಂಕುಗಳು ಎಷ್ಟು?

ಉ) ನಷ್ಟದಲ್ಲಿರುವ ಈ ಬ್ಯಾಂಕು ಹಾಗೂ ಸಂಘಗಳ ಒಟ್ಟು ಹಾನಿ ದಿನಾಂಕ:1.3.2003ಕ್ಕೆ ಎಷ್ಟು?

ಊ) ಈ ಗ್ರಾಮಾಂತರ ಸಂಘ ಹಾಗೂ ಬ್ಯಾಂಕುಗಳು ಸಮರ್ಪಕವಾಗಿ ಕೆಲಸ ಮಾಡಲು ಸರ್ಕಾರದ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 4487 ಗ್ರಾಮ ವ್ಯವಸಾಯ ಸೇವಾ ಸಂಘಗಳಿವೆ. ಜಿಲ್ಲಾವಾರು ವಿವರ ಅನುಬಂಧ –1 ರಲ್ಲಿ ಲಗತ್ತಿಸಿದೆ.

ಆ) ದಿನಾಂಕ 31/3/2003 ಕ್ಕೆ ಅನ್ವಯವಾಗುವಂತೆ 3873 ಸೇವಾ ಸಹಕಾರ ಸಂಘಗಳು ಬ್ಯಾಂಕುಗಳಾಗಿ ಕೆಲಸ ಮಾಡುತ್ತಿದೆ.

ಇ) ಈ ಸಂಘ:ಬ್ಯಾಂಕುಗಳು ದಿನಾಂಕ : 31/03/2003ಕ್ಕೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ಕಟ್ಟಬೇಕಾದ ಸಾಲದ

ಅಸಲು –ರೂ. 2,104.36 ಕೋಟಿ

ಬಡ್ಡಿ –ರೂ. 261.65 ಕೋಟಿ

ಈ) 2002–03ನೇ ಸಾಲಿನಲ್ಲಿ 1885 ಸಂಘ ಬ್ಯಾಂಕುಗಳು ಲಾಭಗಳಿಸಿದ್ದು 2602 ಸಂಘ ಬ್ಯಾಂಕುಗಳು ಹಾನಿಗೊಳಗಾಗಿವೆ.

ಉ) ರೂ. 132.37 ಕೋಟಿ

ಊ) ಈ ಗ್ರಾಮ ಸೇವಾ ಸಂಘಗಳು ಮತ್ತು ಬ್ಯಾಂಕುಗಳು ಸಮರ್ಪಕವಾಗಿ ಕೆಲಸ ಮಾಡಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಗಗಳಲ್ಲಿ ವ್ಯಪಾರಾಭಿವೃದ್ಧಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದರಡಿಯಲ್ಲಿ ಗ್ರಾಮಾಂತರ ಪ್ರದೇಸಗಳ ಸಹಕಾರ ಸಂಘಗಳು ಠೇವಣಿ ಸಂಗ್ರಹಣೆ ಮಾಡಲು